**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**

ಸಿಸಿ ನಂಬರ್ **981/2023**

| | | | |
|---|---|---|---|
| ಸಾಕ್ಷಿಯ ಹೆಸರು | : ವಿಜಯಕುಮಾರ್ | | ಸಿ.ಡಬ್ಲ್ಯೂ **2** |
| ತಂದೆಯ ಹೆಸರು | : ರಾಜಪ್ಪ | | ಪಿ.ಡಬ್ಲ್ಯೂ **3** |
| ವಯಸ್ಸು | : **34** ವರ್ಷ | | |
| ಉದ್ಯೋಗ | : ಅಬಕಾರಿ ಪೇದೆ | | |
| ವಾಸ ಸ್ಥಳ | : ತರೀಕೆರೆ | | |

ದಿನಾಂಕ:**24.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-**

ನಾನು 25.10.2019 ರಿಂದ ಇಲ್ಲಿಯವರೆಗು ತರೀಕೆರೆಯಲ್ಲಿ ಅಬಕಾರಿ ಪೇದೆ ಎಂದು ಕೆಲಸ ಮಾಡುತ್ತಿದ್ದೇನೆ.

ಈ ಪ್ರಕರಣದಲ್ಲಿ ದಿನಾಂಕ 28-03-2023 ರಂದು ಸಂಜೆ 04-30 ರ ಸುಮಾರಿಗೆ ಲಕ್ಕವಳ್ಳಿ ಕ್ರಾಸಿನಲ್ಲಿ ಚಾಸಾ-1 ರವರೊಂದಿಗೆ ರಸ್ತೆ ಕಾವಲಿನಲ್ಲಿ ಇದ್ದಾಗ ತರೀಕೆರೆ ಕಡೆಯಿಂದ ರಾಂಪುರ ಕಡೆಗೆ ಹೋಗುವ ರಸ್ತೆಯಲ್ಲಿ ಒಂದು ಸಿಲ್ವರ್ ಬಣ್ಣದ ಮಾರುತಿ ಓಮಿನಿ ಗಾಡಿಯಲ್ಲಿ ಅಕ್ರಮಾಗಿ ಮದ್ಯ ಸಾಗಾಟ ಮಾಡುತ್ತಿರುವ ಬಗ್ಗೆ ಚಾಸಾ-1 ರವರಿಗೆ ಮಾಹಿತಿ ಬಂದಿದೆ. ರಸ್ತೆಯಲ್ಲಿ ಹೋಗುತ್ತಿದ್ದ ಚಾಸಾ-3 ರವರನ್ನು ನಮ್ಮ ಜೊತೆ ಪಂಚರಾಗಿ ಬರುವಂತೆ ತಿಳಿಸಿ ಅವರನ್ನು ನಮ್ಮ ಜೊತೆ ಕರೆದುಕೊಂಡು ಮಾಹಿತಿ ಬಂದ ಸ್ಥಳದ ಹತ್ತಿರ ಕಾಯುತ್ತಾ ನಿಂತೆವು. ಸ್ವಲ್ಪ ಸಮಯದ ನಂತರ ತರೀಕೆರೆ ಪಟ್ಟಣದ ಕಡೆಯಿಂದ ಮಾಹಿತಿ ಬಂದ ಕಾರು ವೇಗವಾಗಿ ಬರುತ್ತಿತ್ತು. ನಾವು ವಾಹನವನ್ನು ತಡೆದು ನಿಲ್ಲಿಸಿದೆವು. ವಾಹನದಲ್ಲಿ ಒಬ್ಬ ಚಾಲಕ ಮಾತ್ರ ಇದ್ದನು, ಆತನು ತನ್ನ ಹೆಸರನ್ನು ವೇಲು ಎಂದು ತಿಳಿಸಿದನು. ವಾಹನವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ.ಎಲ್ ನ 96 ಓರಿಜಿನಲ್ ಚಾಯ್ಸ್ ವಿಸ್ಕಿಯ ಟೆಟ್ರಾ ಪ್ಯಾಕೇಟುಗಳು ದೊರೆತವು. ಅವುಗಳನ್ನು ಇಟ್ಟುಕೊಳ್ಳಲು ಅಥವಾ ಸಾಗಾಟ ಮಾಡಲು ಆರೋಪಿಯ ಬಳಿ ಪರವಾನಗಿ ಅಥವಾ ರಹದಾರಿ ಇರಲಿಲ್ಲ. ಸದರಿ ಮದ್ಯವನ್ನು ಚಾಸಾ-3 ಇವರ ಸಮಕ್ಷಮ ಸಂಜೆ 4-30 ರಿಂದ 5-30 ಗಂಟೆ ಮದ್ಯದಲ್ಲಿ ಪಂಚನಾಮೆಯನ್ನು ಜರುಗಿಸಿ ಮದ್ಯವನ್ನು ಕಾರಿನ ಸಮೇತ ಚಾಸಾ-1 ರವರು ತಮ್ಮ ವಶಕ್ಕೆ ಪಡೆದುಕೊಂಡರು. ನಂತರ ಆರೋಪಿ ಮತ್ತು ಮುದ್ದೆಮಾಲಿನೊಂದಿಗೆ ಕಛೇರಿಗೆ ಬಂದು

ಸರ್ಕಾರದ ತರ್ಫೆ ಚಾಸಾ-1 ರವರು ಪ್ರಕರಣವನ್ನು ದಾಖಲಿಸಿದ್ದಾರೆ. ಆರೋಪಿಯನ್ನು ನೋಡಿ ಗುರುತಿಸುತ್ತೇನೆ. ಮು.ಮಾ.1 ನ್ನು ನೋಡಿ ಗುರುತಿಸುತ್ತೇನೆ. ಇದೇ ರೀತಿ ಅಬಕಾರಿ ಉಪವಿಭಾಗಾಧಿಕಾರಿಗಳಿಗೆ ಹೇಳಿಕೆಯನ್ನು ದಿನಾಂಕಃ 03.04.2023 ರಂದು ಕೊಟ್ಟಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಮಗೆ ಮಾಹಿತಿ ಬಂದಾಗ ಲಕ್ಕವಳ್ಳಿ ಕ್ರಾಸ್ ನಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದೆವು. ಮಾಹಿತಿ ಬರುವುದಕ್ಕಿಂತ ಮೊದಲು 4-5 ವಾಹನಗಳನ್ನು ಮಾತ್ರ ಪರೀಕ್ಷೆ ಮಾಡಿದ್ದೇವೆ. ಮಾಹಿತಿ ಬಂದ ನಂತರ ಆರೋಪಿಯ ವಾಹನವನ್ನು ಹೊರತುಪಡಿಸಿ ಬೇರೆ ಯಾವುದೇ ವಾಹನಗಳನ್ನು ತಪಾಸಣೆ ಮಾಡಿಲ್ಲ. ಸಾಮಾನ್ಯವಾಗಿ ಲಕ್ಕವಳ್ಳಿ ಕ್ರಾಸ್ ನಲ್ಲಿ ವಾಹನ ಸಂಚಾರ ಹೆಚ್ಚಾಗಿ ಇರುತ್ತದೆ ಎಂದರೆ ಸರಿ. ರಾಮಾಪುರ ಕಾವಲು ನಾವು ನಿಂತಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಅಂದರೆ 1 ಕಿ.ಮೀ.ಅಂತರದಲ್ಲಿ ಇರಬಹುದು. ಅಲ್ಲಿ ಜನ ವಸತಿ ಇದೆ ಎಂದರೆ ಇರಬಹುದು ಆದರೆ ನಾವು ನಿಂತಿದ್ದ ಸ್ಥಳದಲ್ಲಿ ಜನ ವಸತಿ ಇರುವುದಿಲ್ಲ. ಚಾಸಾ-1 ರವರಿಗೆ ಯಾವುದೇ ಮಾಹಿತಿ ಬಂದಿಲ್ಲ, ನಾನು ಅವರೊಂದಿಗೆ ಯಾವುದೇ ದಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಾಹನದಿಂದ ನಾವು ಯಾವುದೇ ಮದ್ಯವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ಕ್ಕೂ ಮತ್ತು ಈ ಪ್ರಕರಣಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮು.ಮಾ.1 ರಂತಹ ಖಾಲಿ ಪ್ಯಾಕೇಟುಗಳು ಸಾಮಾನ್ಯವಾಗಿ ಎಲ್ಲಾ ಮದ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿಯಲ್ಲ. ಇಲಾಖೆಯ ಅಂಕಿಸಂಖ್ಯೆಗೋಸ್ಕರ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ : ಇಲ್ಲಃ</u>

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.